the House has to be interpreted strictly. While on the one hand the chair has to ensure that no discussion in the House should prejudice the course of Justice the Chair has also to see that the House is not debarred from discussing an urgent matter of public importance on the ground that a similar allied or linked matter is before a court of Law.

ಇನ್ನೂ ಮುಂದೆ ಹೋಗಿ ಈ ರೀತಿ ಹೇಳಲಾಗಿದೆ.

It has been held that a matter is not sub-judice until legal proceedings have actually started. The question whether a particular matter is sub-judice is decided by the Speaker on the merits of each case.

ಪ್ರಸ್ತುತ ಈ ವಿಷಯವು ಇನ್ನೂ ನ್ಯಾಯಾಧೀಶರ ನೇಮಕ ಮಾಡುವ ಹಂತದಲ್ಲಿರುವ ಪ್ರಯುಕ್ತ ಝಳಕಿ ಗೋಲಿಬಾರ್ ಪ್ರಕರಣವು ಚರ್ಚೆ ಮಾಡುವುದರಿಂದ (sub-judice) ವಿಚಾರಣೆ ಹಂತದಲ್ಲಿರುವ ವಿಷಯವಾಗುವುದಿಲ್ಲವೆಂದು ತೀರ್ಮಾನಿಸಿರುತ್ತೇನೆ ಹಾಗೂ ಈ ವಿಷಯವನ್ನು ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅನುಮತಿಯನ್ನು ನೀಡುತ್ತಿದ್ದೇನೆ.

ಇನ್ನು ಮುಂದೆ ಮಾನ್ಯ ಸದಸ್ಯರುಗಳು ಆದಷ್ಟು ನ್ಯಾಯಾಲಯದ ಮುಂದೆ ವಿಚಾರಣಾ ಹಂತದಲ್ಲಿರುವ ವಿಷಯಗಳನ್ನು ಸದನದಲ್ಲಿ ಪ್ರಸ್ತಾಪ ಮಾಡುವುದನ್ನು ಕೈಬಿಡಬೇಕೆಂದು ಮಾನ್ಯ ಸದಸ್ಯರಲ್ಲಿ ವಿನಂತಿಸುತ್ತೇನೆ.

ಈಗ ಸದನವು ನಾಳೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6.40ಕ್ಕೆ ಮುಂದೂಡಲ್ಪಟ್ಟು ನಾಳೆ 16-7-2002 ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿರ್ಧರಿಸಿತು).

ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಿರುತ್ತಾರೆ.

ಮುದ್ರಾಂಕ ಶುಲ್ಕ ಪಾವತಿಯಾಗದಿರುವ ಬಗ್ಗೆ

163(298) ಶ್ರೀ ಕೆ. ಅಭಯಚಂದ್ರ (ಮೂಡಬಿದ್ರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಮುದ್ರಾಂಕ ಶುಲ್ಕ ಪಾವತಿಯಾಗದಿರುವ ಬಗ್ಗೆ ಮೂಡಬಿದ್ರೆ ಹೋಬಳಿಯನ್ನು 1997ರಲ್ಲಿ ಕಾರ್ಕಳ ತಾಲ್ಲೂಕಿನಿಂದ ಮಂಗಳೂರು ತಾಲ್ಲೂಕಿಗೆ ಸೇರ್ಪಡೆಗೊಂಡಿದ್ದು, ಮೂಡಬಿದ್ರೆ ಹೋಬಳಿ ಜನ ಸಂಖ್ಯೆ 80,000 ಆಗಿರುವುದು. ಆದರೆ 1997 ರಿಂದ ಈತನಕ ಜನ ಸಂಖ್ಯೆಯ ಆಧಾರದಲ್ಲಿ ವಿತರಿಸುತ್ತಿರುವ ಮುದ್ರಾಂಕ ಶುಲ್ಕವನ್ನು ಮಂಗಳೂರು ತಾಲ್ಲೂಕು ಪಂಚಾಯತಿಗೆ ನೀಡದಿರಲು ಕಾರಣವೇನು?

2. 1997 ರಿಂದ 2001 ರವರೆಗಿನ ಮುದ್ರಾಂಕ ಶುಲ್ಕ ವಿತರಣಾ ಪಟ್ಟಿ ನೀಡುವುದು ಮಂಗಳೂರು ತಾಲ್ಲೂಕ್ ಮೂಡಬಿದ್ರೆ ಹೋಬಳಿ ಸೇರ್ಪಡೆಗೊಂಡ ಬಳಿಕೆ ಮುದ್ರಾಂಕ ಶುಲ್ಕ ಪಾವತಿಗಾಗಿ ಯಾವ ಕ್ರಮ ಕೈಗೊಳ್ಳಲಾಗಿದೆ?

3. ಹಿಂದಿನ ಬಾಕಿಯಿರುವ ಮುದ್ರಾಂಕ ಶುಲ್ಕ ಯಾವಾಗ ಪಾವತಿಸಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

1. ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ ಕಲಂ 265(5) ರನ್ವಯ ರಾಜ್ಯದಲ್ಲಿ ಎಲ್ಲಾ ಉಪ ನೋಂದಣಾಧಿಕಾರಿ ಕಛೇರಿಗಳಿಂದ ಸಂಗ್ರಹವಾಗುವ ಹೆಚ್ಚುವರಿ ಮುದ್ರಾಂಕ ಶುಲ್ಕದ ವಿವರಗಳನ್ನು ಪ್ರತಿ ತಿಂಗಳು ಸಂಬಂಧಪಟ್ಟ ಜಿಲ್ಲಾ ನೋಂದಣಾಧಿಕಾರಿಗಳಿಗೆ ಉಪ ನೋಂದಣಾಧಿಕಾರಿಗಳು ಸಲ್ಲಿಸುತ್ತಾರೆ. ಸದರಿ ಹೆಚ್ಚುವರಿ ಮುದ್ರಾಂಕ ಶುಲ್ಕದಲ್ಲಿ ಶೇಕಡ 10 ರಷ್ಟು ಸರ್ಕಾರಿ ಕಮಿಷನ್ ಕಡಿತಗೊಳಿಸಿ ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳು ಹೆಚ್ಚುವರಿ ಮುದ್ರಾಂಕ ಶುಲ್ಕದ ತಃಖ್ತೆಗಳನ್ನು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಛೇರಿಗೆ ಸಲ್ಲಿಸುತ್ತಾರೆ. ರಾಜ್ಯದ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಪ್ರತಿಯೊಬ್ಬ ಪ್ರಜೆಗೆ ಅನ್ವಯವಾಗುವಂತೆ ಕ್ರೋಢೀಕರಿಸಿದ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ವಿಭಜಿಸಿ ತಾಲ್ಲೂಕುವಾರು ಜನಸಂಖ್ಯೆಯ ಆಧಾರದ ಮೇಲೆ ಬಿಡುಗಡೆ ಮಾಡಲಾಗುತ್ತಿದೆ. ಅದರಂತೆ ಮಂಗಳೂರು ತಾಲ್ಲೂಕ್ ಪಂಚಾಯಿತಿಗೂ ಸಹ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಬಿಡುಗಡೆ ಮಾಡಲಾಗುತ್ತಿದೆ.

2. 1997 ರಿಂದ 2001 ರವರೆಗಿನ ಮುದ್ರಾಂಕ ಶುಲ್ಕ ವಿತರಣಾ ಪಟ್ಟಿ ಈ ಕೆಳಕಂಡಂತಿದೆ.

ಕ್ರ. ಸಂ.	ಅವಧಿ	ಮೊತ್ತ
1.	1-1-97 ರಿಂದ 30-6-97	17,61,168.77
2.	1-7-97 ರಿಂದ 31-12-97	15,50,026.44
3.	1-1-98 ರಿಂದ 30-6-98	21,35,098.06
4.	1-7-98 ರಿಂದ 31-12-98	14,59,350
5.	1-1-99 ರಿಂದ 31-7-99	8,39,490
6.	1-4-99 ರಿಂದ 20-6-99	88,365
7.	1-7-99 ರಿಂದ 30-9-99	7,48,071
8.	1-10-99 ರಿಂದ 31-12-99	6,90,157
9.	1-1-2000 ರಿಂದ 31-3-2000	7,84,565
10.	1-4-2000 ರಿಂದ 30-6-2000	10,72,872
11.	1-7-2000 ರಿಂದ 30-9-2000	9,56,538
12.	1-10-2000 ರಿಂದ 31-12-2000	8,64,210
13.	1-1-2001 ರಿಂದ 31-3-2001	9,70,173

ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಮೇಲಿನಂತೆ ಈಗಾಗಲೇ ಮಂಗಳೂರು ತಾಲ್ಲೂಕ್ ಪಂಚಾಯಿತಿಗೆ ಬಿಡುಗಡೆ ಮಾಡಲಾಗಿದೆ.

3. ಮಂಗಳೂರು ತಾಲ್ಲೂಕು ಪಂಚಾಯಿತಿಗೆ ಬಿಡುಗಡೆ ಮಾಡಬೇಕಾದ ಹೆಚ್ಚುವರಿ ಮುದ್ರಾಂಕ ಶುಲ್ಕ ಬಾಕಿ ಇರುವುದಿಲ್ಲ.

ಮುಜರಾಯಿ ದೇವಾಲಯಗಳ ಅಭಿವೃದ್ಧಿ

164 (516) ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ವಿ. (ಚಿಕ್ಕಬಳ್ಳಾಪುರ) ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಪುರಾತನ ಕಾಲದ ಅನೇಕ ಶಿಥಿಲಗೊಂಡಿರುವ ದೇವಾಲಯಗಳಿದ್ದು ಪ್ರತಿ ವರ್ಷ 2 ಅಥವಾ 3 ದೇವಾಲಯಗಳಿಗೆ ಮಾತ್ರ ಅನುದಾನ ನೀಡಿ ಕಟ್ಟಡಗಳ ಪುನರ್ ನವೀಕರಣ ಕಾರ್ಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ, ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿರುವ ಎಲ್ಲಾ ದೇವಾಲಯಗಳಿಗೆ ಮುಜರಾಯಿ ಇಲಾಖೆಯಿಂದ ಹಣವನ್ನು ಬಿಡುಗಡೆಗೊಳಿಸಿ ಶಿಥಿಲ ದೇವಾಲಯಗಳ ಜೀರ್ಣೋದ್ಧಾರಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ಸಚಿವರು)

1. ಹೌದು.

2. ಸ್ಥಳೀಯ ಭಕ್ತಾದಿಗಳು ಅಥವಾ ಸಾರ್ವಜನಿಕರು ಮುಂದೆ ಬಂದು ಅಂದಾಜು ಪಟ್ಟಿ ತಯಾರಿಸಿ ಶೇ. 50 ರಷ್ಟು ಸಾರ್ವಜನಿಕ ವಂತಿಗೆ ಭರಿಸಿ ನಿಯಮಾನುಸಾರ ಅನುದಾನ ಹಂಚಿಕೆ ಮಾಡುವ ಬಗ್ಗೆ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಿದ್ದಲ್ಲಿ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಲಭ್ಯತೆಯನುಗುಣವಾಗಿ ಹಂಚಿಕೆ ಮಾಡಲು ಪರಿಶೀಲಿಸಲಾಗುವುದು.

ಮುಳಗು ಸೇತುವೆಯನ್ನು ಸರ್ವಋತು ಸೇತುವೆಯನ್ನಾಗಿ ಮಾರ್ಪಾಡು

165(645) ಶ್ರೀ ಅಂಗಾರ ಎಸ್ (ಸೂಳ್ಯ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಜಾಲ್ಸೂರು-ಸುಬ್ರಹ್ಮಣ್ಯ ರಸ್ತೆಯ ಸೋಣಂಗೇರಿ ಮತ್ತು ಕೈಕುಳಿ ಎಂಬಲ್ಲಿ ಮುಳುಗು ಸೇತುವೆಗಳಿದ್ದು ಮಳೆಗಾಲದಲ್ಲಿ ವಿಪರೀತ ಮಳೆಯಿಂದಾಗಿ ಮಳೆ ನೀರು ಬಂದು ವಾಹನ ಸಂಚಾರ ಹಾಗೂ ಸಾರ್ವಜನಿಕರಿಗೆ ಓಡಾಡಲು ತುಂಬ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಬಂದಿದ್ದಲ್ಲಿ, ಸದರಿ ಸೇತುವೆಯನ್ನು ಸರ್ವಋತು ಸೇತುವೆಯನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ. ಬಂದಿರುತ್ತದೆ.